# ವಾರ್ತಾ ವಿಶ್ಲೇಷಣೆ

**ಶ್ರೀಮಂತನ ಶ್ರೀಮಂತ ಬದುಕು:** ಜಗತ್ತಿನ ಎರಡನೆಯ ಅತಿ ದೊಡ್ಡ ಶ್ರೀಮಂತ ವಾರೆನ್ ಬಫೆಟ್. ಅಮೆರಿಕೆಯಲ್ಲಿರುವ ಅವನಿಗೆ ಹಣಕ್ಕಿಂತ ಮಿಗಿಲಾದುದು **ಜೀವನ, ಮಾನವೀಯತೆ ಮತ್ತು ಮಾನವ ಸಂಬಂಧಗಳು.** ಹಾಗೆಂದೇ ಅವನು ತನ್ನ ಕಾರನ್ನು ತಾನೇ ಓಡಿಸುತ್ತಾನೆ. ರಕ್ಷಣಾ ಸಿಬ್ಬಂದಿಯೂ ಅವನಿಗಿಲ್ಲ. ಯಾವಾಗಲೂ ಕಡಿಮೆ ಬೆಲೆಯ ವಿಮಾನ ಯಾನವನ್ನೇ ಮಾಡುತ್ತಾನೆ. ಅವನು ತನ್ನ ಟೇಬಲಿನ ಮೇಲೆ ಒಂದು ಕಂಪ್ಯೂಟರನ್ನು ಕೂಡ ಇಟ್ಟುಕೊಂಡಿಲ್ಲ. ಅವನ ಬಳಿ ಒಂದು ಮೊಬೈಲ್ ಫೋನ್ ಸಹ ಇಲ್ಲ. ಅವನು ೨೩ ಕಂಪನಿಗಳ ಒಡೆಯ. ತನ್ನ ಕಂಪನಿಗಳ ನಿರ್ವಾಹಕರಿಗೆ ಅವನು ವಿಧಿಸುವುದು ಎರಡು ಷರತ್ತುಗಳನ್ನು ಮಾತ್ರ: ಒಂದು, *ಷೇರುದಾರರ ಹಣವನ್ನು ಕಳೆಯಬೇಡಿ.* ಇನ್ನೊಂದು, *ಮೊದಲ ಷರತ್ತನ್ನು ಕಡ್ಡಾಯವಾಗಿ ಪಾಲಿಸಿ.*

ವಾರೆನ್ ಯಾವ ಔತಣಕೂಟದಲ್ಲಿಯೂ ಭಾಗವಹಿಸುವುದಿಲ್ಲ. ಕಚೇರಿಯ ಕೆಲಸ ಮುಗಿದ ತಕ್ಷಣ ಮನೆಗೆ ಬರುತ್ತಾನೆ. ಅಮೆರಿಕೆಯ ಸಣ್ಣ ನಗರವಾದ ಒಮಾಹಾದಲ್ಲಿ ಮೂರು ಬೆಡ್ ರೂಮ್‌ಗಳಿರುವ ಪುಟ್ಟ ಮನೆ ಅವನದು. ಅದನ್ನು ಅವನು ಖರೀದಿಸಿದ್ದು ಐವತ್ತು ವರ್ಷಗಳ ಹಿಂದೆ. ತಾನೆ ಅಡುಗೆಯ ಮನೆಗೆ ಹೋಗಿ, ಪಾಪ್ ಕಾರನ್‌ಗಳನ್ನು ಬೇಯಿಸಿಕೊಂಡು ತಿನ್ನುತ್ತಾನೆ; ಪುಸ್ತಕಗಳನ್ನು ಓದುತ್ತಾನೆ; ಕುಟುಂಬದವರೊಡನೆ ಮುಕ್ತವಾಗಿ ಬೆರೆಯುತ್ತಾನೆ. ಒಟ್ಟಿನಲ್ಲಿ ತನಗೆ ಯಾವುದು ಇಷ್ಟವೋ ಅದನ್ನು ಮಾಡುತ್ತಾನೆ. ಎಲ್ಲಕ್ಕೂ ಮಿಗಿಲಾಗಿ, ತಾನು ಮಾಡುವುದನ್ನೆಲ್ಲ ಇಷ್ಟಪಟ್ಟು ಮಾಡುತ್ತಾನೆ.

ಅವನು ಯುವಕರಿಗೆ ನೀಡುವ ಸಲಹೆಗಳು ಇವು: ೧. ಹಣವು ಮನುಷ್ಯನನ್ನು ಸೃಷ್ಟಿಸುವುದಿಲ್ಲ. ಮನುಷ್ಯ ಹಣವನ್ನು ಸೃಷ್ಟಿಸುತ್ತಾನೆ. ಆದ್ದರಿಂದ, ಸಾಲ ಮಾಡಬೇಡಿ. ೨. ನಿಮ್ಮ ಮೇಲೆಯೇ ಸಮಯ ಮತ್ತು ಹಣವನ್ನು ತೊಡಗಿಸಿ. ೩. ಎಷ್ಟು ಸಾಧ್ಯವೋ ಅಷ್ಟು ಸರಳ ಜೀವನ ಸಾಗಿಸಿ. ೪. ಬೇರೆಯವರು ಹೇಳಿದಂತೆ ನೀವು ಮಾಡಬೇಕಾಗಿಲ್ಲ. ಅವರು ಹೇಳಿದ್ದಕ್ಕೆ ಗಮನ ಕೊಡಿ. ಆದರೆ ನಿಮಗೆ ಅನ್ನಿಸಿದ್ದನ್ನೆ ನೀವು ಮಾಡಿ. ೫. ಅನಗತ್ಯವಾಗಿ ಖರ್ಚು ಮಾಡಬೇಡಿ. ದುಡಿಯುವುದೆಲ್ಲ ಖರ್ಚು ಮಾಡಲಿಕ್ಕಲ್ಲ. ೬. ಅಷ್ಟಕ್ಕೂ ಈ ಜೀವನ ನಿಮ್ಮದು. ಬೇರೆಯವರು ಅದನ್ನು ಆಳುವುದಕ್ಕೆ ಅವಕಾಶ ಕೊಡಬೇಡಿ. ಕೊನೆಗೊಂದು ಅವನು ಹೇಳುವ ಮುತ್ತಿನಂಥ ಮಾತು: **"ಅತ್ಯಂತ ಖುಷಿಯಿಂದ ಇರುವ ವ್ಯಕ್ತಿಯ ಹತ್ತಿರ ಅತ್ಯಂತ ಉತ್ಕೃಷ್ಟವಾದ ವಸ್ತುಗಳು ಇಲ್ಲದಿರಬಹುದು; ಆದರೆ ತನ್ನ ಹತ್ತಿರ ಇರುವುದೆಲ್ಲದರಲ್ಲೂ ಅತ್ಯುತ್ಕೃಷ್ಟತೆಯನ್ನೇ ಕಾಣುತ್ತಾನೆ."**

(*ವಿಜಯ ಕರ್ನಾಟಕ*, ಫೆಬ್ರವರಿ ೧೪, ೨೦೦೮)

**ಐತಿಹಾಸಿಕ ಸ್ಥಾನವನ್ನು ಪುನಃ ದಕ್ಕಿಸಿಕೊಳ್ಳುತ್ತಿರುವ ಭಾರತ:** ವಿಲಿಯಮ್ ಡಲ್‌ರಿಂಪಲ್ ಎಂಬ ಸ್ಕಾಟ್ಲೆಂಡ್ ಇತಿಹಾಸಜ್ಞರು, ಟೈಮ್ ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ, ಅದರ ಪ್ರಕಾರ, ಭಾರತ ಬಡ ದೇಶವಾಗಿರುವುದು ಇತ್ತೀಚಿನ ಸಂಗತಿ. ಪ್ರಾಚೀನ ಇತಿಹಾಸವನ್ನು ಅಧ್ಯಯನ ಮಾಡಿದಾಗ, ಭಾರತ ಮತ್ತು ಚೀನಾ ದೇಶಗಳು ಸಂಪದ್ಭರಿತ ದೇಶಗಳಾಗಿದ್ದವು ಎಂದು ತಿಳಿದುಬರುತ್ತದೆ. ೧೭ ನೆಯ ಶತಮಾನದವರೆಗೂ ಭಾರತ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಮೊಗಲ್ ಪಟ್ಟಣಗಳಾದ ಲಾಹೋರ್ ಮತ್ತು ಆಗ್ರಾಗಳು ಲಂಡನ್ ಮತ್ತು ಪ್ಯಾರಿಸ್ ನಗರಗಳಿಗಿಂತಲೂ ಶ್ರೀಮಂತವಾಗಿದ್ದವು.

೧೭೦೦ ರಲ್ಲಿ ಇಡೀ ವಿಶ್ವದ ಒಟ್ಟು ಆದಾಯದ ಕೇವಲ ೧.೮% ರಷ್ಟು ಬ್ರಿಟನ್ ಹೊಂದಿದ್ದರೆ, ಭಾರತ ೨೨.೫% ರಷ್ಟು ವರಮಾನವನ್ನು ಹೊಂದಿತ್ತು. ಭಾರತದ ಅವನತಿ ಯುರೋಪಿಯನ್ನರ ವಸಾಹತುಶಾಹಿಯಿಂದ ಆರಂಭವಾಯಿತು. ಹಿಂದೆ, ವ್ಯಾಪಾರದಲ್ಲಿ ಯಾವಾಗಲೂ ಹಿಂದುಳಿದಿದ್ದ ಅವರು, ಮೊದಲ ಬಾರಿಗೆ ಭಾರತಕ್ಕೆ ಸರಿಸಮನಾಗಿ ವಹಿವಾಟು ನಡೆಸಲಾರಂಭಿಸಿದರು. ಡಲ್‌ರಿಂಪಲ್ ಅವರ ಪ್ರಕಾರ, ಭಾರತ ಮತ್ತು ಚೀನಾ ದೇಶಗಳು ಈಗ ತಮ್ಮ ಆರ್ಥಿಕ ಬಲವನ್ನು ಹೆಚ್ಚಿಸಿಕೊಳ್ಳುತ್ತಿರುವುದು, ಆಶ್ಚರ್ಯಕರವಾದ ಸಂಗತಿಯೇನಲ್ಲ. ಆ ದೇಶಗಳು ತಮ್ಮ ಮಧ್ಯಕಾಲೀನ ಯುಗದ ಸ್ಥಾನವನ್ನು ಮತ್ತೆ ದಕ್ಕಿಸಿಕೊಳ್ಳುವ ಪ್ರಯತ್ನದಲ್ಲಿ ಮುನ್ನಡೆದಿವೆ, ಅಷ್ಟೆ.

ಭಾರತವು ಪ್ರಬಲ ರಾಷ್ಟ್ರವಾಗುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಅಮೆರಿಕೆಯ ಗುಪ್ತಚಾರ ವರದಿಗಳ ಪ್ರಕಾರ ಚೀನಾ ದೇಶವು ೨೦೩೦ ಮತ್ತು ೨೦೪೦ ರ ನಡುವಿನ ಅವಧಿಯಲ್ಲೂ, ಭಾರತವು ೨೦೫೦ ರ ವೇಳೆಗೂ ಅಮೆರಿಕೆಯನ್ನು, ಆರ್ಥಿಕವಾಗಿ ಹಿಂದೆ ಹಾಕಲಿವೆ. ಭಾರತವು ಮೂರನೆಯ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ, ಈಗಾಗಲೇ ಜಪಾನ್ ದೇಶವನ್ನೂ ಹಿಂದೆ ಹಾಕುವ ಸನ್ನಾಹದಲ್ಲಿದೆ. ಇತಿಹಾಸವು ಮರುಕಳಿಸುತ್ತಿರುವ ಈ ಕಾಲದಲ್ಲಿ, ಯುರೋಪಿಯನ್ನರು ವಸಾಹತುಶಾಹಿಗಳ ಪಾತ್ರವನ್ನು ವಹಿಸುವುದಿಲ್ಲ; ಅದಕ್ಕೆ ಬದಲಾಗಿ, ಮಧ್ಯಕಾಲೀನ ಯುಗದಲ್ಲಿದ್ದಂತೆ, ಭಾರತ ಮುಂತಾದ ಪೂರ್ವದೇಶಗಳಿಂದ ರಫ್ತಾಗುವ ಉತ್ಪನ್ನಗಳ ಮತ್ತು ಸೇವೆಗಳ ಗ್ರಾಹಕರಾಗುತ್ತಾರೆ. ಈ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ.

**ಪಾಶ್ಚಾತ್ಯ ವಿದ್ವಾಂಸರೊಬ್ಬರು ಭಾರತದ ಭವಿಷ್ಯದ ಮೇಲೆ ಇಟ್ಟಿರುವ ಅಪಾರ ವಿಶ್ವಾಸ, ಭಾರತೀಯರಾದ ನಮ್ಮ ಕಣ್ಣುತೆರೆಸಬೇಕು. ತಮ್ಮಲ್ಲಿ ತಮಗೆ ನಂಬಿಕೆ ಇಲ್ಲದವರು, ಏನನ್ನೂ ಸಾಧಿಸಲಾರರು. ಅಲ್ಲವೆ?**

(*ಹಿಂದುಯಿಸಂ ಟುಡೆ*, ಜನವರಿ–ಫೆಬ್ರವರಿ–ಮಾರ್ಚ್ ಸಂಚಿಕೆ, ೨೦೦೮)

**ಶಿಕ್ಷಣಕ್ಷೇತ್ರದ ಹೊಸ ಬೆಳವಣಿಗೆಗಳು :** *'ಕ್ಲಿಕ್ ಮಾಡಿ, ವಿಷಯವನ್ನು ಕಲಿತು, ಪರೀಕ್ಷೆಗಳನ್ನು ಪಾಸು ಮಾಡಿ'* – ಇದು ಹಿಂದೂ ಪತ್ರಿಕೆಯ ಶೈಕ್ಷಣಿಕ ಪುರವಣಿಯ ಒಂದು ಶೀರ್ಷಿಕೆ. ಇತ್ತೀಚಿಗೆ, ವಿದ್ಯಾರ್ಥಿಯ ಜತೆಗೆ ಸಂವಹಿಸಬಲ್ಲ ಇಂಟರ್–ನೆಟ್ ತಂತ್ರಾಂಶಗಳು (Software) ಬಂದಿವೆ. ವಿದ್ಯಾರ್ಥಿಗಳ ಉತ್ತರಗಳನ್ನು ಇವು ತಿದ್ದುವುದು ಮಾತ್ರವಲ್ಲದೆ, ಅವರ ಸಂದೇಹಗಳಿಗೆ ಉತ್ತರಗಳನ್ನೂ ಕೊಡುತ್ತವೆ. **ಆದರೆ ಮಾನವ ಶಿಕ್ಷಕನ ಹಾಗೆ ಸ್ಫೂರ್ತಿಯನ್ನೂ ಪ್ರೋತ್ಸಾಹವನ್ನೂ ಈ ತಂತ್ರಾಂಶಗಳು ವಿದ್ಯಾರ್ಥಿಗಳಿಗೆ ಕೊಡಲು ಸಾಧ್ಯವೆ? ಅಸಾಧ್ಯವೆಂದೇ ತೋರುತ್ತದೆ.**

ಇತ್ತೀಚಿಗೆ ಐ.ಟಿ. ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಗೊಣಗುತ್ತಿದ್ದಾರೆ. ಅವರಿಗೆ ನೀಡುತ್ತಿರುವ ಶಿಕ್ಷಣದಲ್ಲಿ, ಕುಶಲತೆಗಳಿಗಷ್ಟೇ ಪ್ರಾಮುಖ್ಯತೆ ನೀಡುತ್ತಿರುವುದರಿಂದ, ಅದರ ಗುಣಮಟ್ಟ ಕಡಿಮೆಯಾಗಿದೆ ಎಂದು ಅವರು ಹೇಳುತ್ತಾರೆ. ಮೂಲಭೂತ ಪರಿಕಲ್ಪನೆಗಳ ಬಗ್ಗೆ ಸರಿಯಾದ ಪರಿಜ್ಞಾನ ಹಲವಾರು ಕೋರ್ಸ್‌ಗಳಿಂದ ದೊರೆಯುತ್ತಿಲ್ಲ ಎನ್ನುವುದು ಅವರ ಅಭಿಪ್ರಾಯ. **ಶಿಕ್ಷಣ, ಕೇವಲ ವೃತ್ತಿ ಆಧಾರಿತವಾಗಿಬಿಟ್ಟರೆ, ಅವನತಿಯನ್ನು ಹೊಂದುತ್ತದೆ ಎನ್ನುವುದಕ್ಕೆ ಇದು ನಿದರ್ಶನ.**

ರಾಷ್ಟ್ರೀಯ ಜ್ಞಾನ ಆಯೋಗವು ನಮ್ಮ ದೇಶದ ಶಾಲೆಗಳ ಗುಣಮಟ್ಟವನ್ನು ಅಳೆಯುವ ಪರೀಕ್ಷಣಾ ಸಂಸ್ಥೆಯನ್ನು ಆರಂಭಿಸಬೇಕೆಂದು ಶಿಫಾರಸು ಮಾಡಿದೆ. ಇದರಿಂದ, ಪೋಷಕರಿಗೆ ತಮ್ಮ ಮಕ್ಕಳ ಶಾಲೆಯನ್ನು ಆಯ್ಕೆ ಮಾಡಲು ಸಹಾಯವಾಗುತ್ತದೆ. **ಪಾರದರ್ಶಕತೆಯನ್ನು ಹೆಚ್ಚಿಸುವ ಈ ವಿಧಾನ ಪೋಷಕರಿಗೆ ವರದಾನವಾಗಬಲ್ಲದು**

(*ದಿ ಹಿಂದೂ*, ಮಾರ್ಚ್ ೩, ೨೦೦೮)